**ಕರ್ನಾಟಕ ಸರ್ಕಾರ**
**ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ**
ಕಾಳಿದಾಸ ಮಾರ್ಗ, ಕೆ.ಜಿ.ರಸ್ತೆ, ಬೆಂಗಳೂರು.

ಸಂಖ್ಯೆ: KPRC/CSM/43/2022 ದಿನಾಂಕ: 01.02.2023

**** ಪರಿಷ್ಕೃತ ಅಧಿಕೃತ ಜ್ಞಾಪನ ****

ವಿಷಯ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯದ ಹಾಗೂ ಪಂಚಾಯತ್ ರಾಜ್ ಆಯುಕ್ತಾಲಯದ ನಿರ್ದೇಶಕರುಗಳಿಗೆ, ಉಪನಿರ್ದೇಶಕರುಗಳಿಗೆ ಹಾಗೂ ಸಮಾಲೋಚಕರುಗಳಿಗೆ ಹಂಚಿಕೆ ಮಾಡಲಾದ ಜಿಲ್ಲೆಗಳಿಗೆ ಭೇಟಿ ನೀಡಿ ಸರ್ಕಾರದ ಯೋಜನೆಗಳ ಅನುಷ್ಠಾನವನ್ನು ಮತ್ತು ಕಾರ್ಯ ಚಟುವಟಿಕೆಗಳನ್ನು ಪರಿವೀಕ್ಷಣೆ ಮಾಡುವ ಕುರಿತು ಪರಿಷ್ಕೃತ ಆದೇಶ.

ಉಲ್ಲೇಖ:1) ಸರ್ಕಾರದ ಆದೇಶ ಸಂ. ಕಪಂರಾಅ/ಅಭಿವೃದ್ಧಿ/406/2022, ದಿನಾಂಕ 26.08.2022.

2) ಪಂಚಾಯತ್ ರಾಜ್ ಆಯುಕ್ತಾಲಯದ ಅಧಿಕೃತ ಜ್ಞಾಪನಾ ಸಂ. KPRC/CSM/43/2022, ದಿನಾಂಕ 09.11.2022.

3) ಪಂಚಾಯತ್ ರಾಜ್ ಆಯುಕ್ತಾಲಯದ ಅಧಿಕೃತ ಜ್ಞಾಪನಾ ಸಂ. KPRC/CSM/43/2022, ದಿನಾಂಕ 02.12.2022.

--------

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಡಿಯಲ್ಲಿ ಜಿಲ್ಲಾ ಪಂಚಾಯಿತಿ, ತಾಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳ ಮೂಲಕ ಹಲವಾರು ಅಭಿವೃದ್ಧಿ ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗುತ್ತಿದೆ. ಸದರಿ ಯೋಜನೆಗಳ ಮತ್ತು ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ನಿರಂತರ ಭೇಟಿ ನೀಡಿ ಪರಿವೀಕ್ಷಣೆ ನಡೆಸಿ ಅಗತ್ಯ ಕ್ರಮ ಕೈಗೊಳ್ಳುವುದು ಹಾಗೂ ಸಲಹೆ ಮತ್ತು ಮಾರ್ಗದರ್ಶನ ನೀಡುವು ಅತ್ಯಗತ್ಯವಾಗಿದೆ. ಉಲ್ಲೇಖ (1) ರ ಸರ್ಕಾರದ ಅಧಿಕೃತ ಜ್ಞಾಪನದ ಹಿನ್ನೆಲೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯದ ಹಾಗೂ ಪಂಚಾಯತ್ ರಾಜ್ ಆಯುಕ್ತಾಲಯದ ನಿರ್ದೇಶಕರುಗಳಿಗೆ, ಉಪನಿರ್ದೇಶಕರುಗಳಿಗೆ ಹಾಗೂ ಸಮಾಲೋಚಕರುಗಳಿಗೆ ಜಿಲ್ಲೆಗಳನ್ನು ಹಂಚಿಕೆ ಮಾಡಿ ತಮಗೆ ಹಂಚಿಕೆ ಮಾಡಲಾದ ಜಿಲ್ಲೆಗಳಿಗೆ ಭೇಟಿ ನೀಡಿ ಜವಾಬ್ದಾರಿಗಳನ್ನು ನಿರ್ವಹಿಸಲು ಪಂಚಾಯತ್ ರಾಜ್ ಆಯುಕ್ತಾಲಯದ ಉಲ್ಲೇಖ (2) ಮತ್ತು (3) ರ ಅಧಿಕೃತ ಜ್ಞಾಪನಗಳಲ್ಲಿ ಆದೇಶಿಸಲಾಗಿರುತ್ತದೆ. ಸದರಿ ಆದೇಶಗಳಲ್ಲಿ ಹಂಚಿಕೆ ಮಾಡಲಾದ ಜಿಲ್ಲೆಗಳನ್ನು ಭಾಗಶಃ ಮಾರ್ಪಡಿಸಿ ಈ ಕೆಳಗಿನಂತೆ ಪರಿಷ್ಕೃತ ಆದೇಶವನ್ನು ಹೊರಡಿಸಿದೆ.

| ಕ್ರ. ಸಂ. | ಜಿಲ್ಲೆ | ನೋಡಲ್ ಅಧಿಕಾರಿಗಳು (ಶ್ರೀ/ಶ್ರೀಮತಿ) | ಸಮಾಲೋಚಕರು (ಶ್ರೀ/ಶ್ರೀಮತಿ) |
|---|---|---|---|
| 1. | ಬಾಗಲಕೋಟೆ | ಕೀರ್ತಿಕರ್ ವಿ.ಟಿ., ಉಪ ನಿರ್ದೇಶಕರು-4, ಕ.ಪಂ.ರಾ.ಆ. | ಡಿ. ಪ್ರಾಣೇಶ್ ರಾವ್, ಸಮಾಲೋಚಕರು |
| 2. | ಬೆಳಗಾವಿ | | |
| 3. | ದಾರವಾಡ | ಶ್ರೀನಿವಾಸ್ ಹೆಚ್.ಎಂ., ನಿರ್ದೇಶಕರು (ಗ್ರಾಮೀಣಾಭಿವೃದ್ಧಿ) | --- |
| 4. | ಗದಗ | | |
| 5. | ಹಾವೇರಿ | | |
| 6. | ಉತ್ತರ ಕನ್ನಡ | ರುದ್ರಪ್ಪ ಕೆ.ಆರ್., ನಿರ್ದೇಶಕರು (ಪಂ.ರಾ.) | --- |
| 7. | ವಿಜಯಪುರ | | |

ಮುಂದುವರೆದಿದೆ.,

| ಕ್ರ. ಸಂ. | ಜಿಲ್ಲೆ | ನೋಡಲ್ ಅಧಿಕಾರಿಗಳು (ಶ್ರೀ/ಶ್ರೀಮತಿ) | ಸಮಾಲೋಚಕರು (ಶ್ರೀ/ಶ್ರೀಮತಿ) |
|---|---|---|---|
| 8. | ಬೀದರ್ | ಡಾ|| ಏಕಾಂತಪ್ಪ ಎಂ.ಆರ್., ನಿರ್ದೇಶಕರು (ಆಡಳಿತ-1), ಕ.ಪಂ.ರಾ.ಆ. | -- |
| 9. | ಕಲಬುರಗಿ | | |
| 10. | ಕೊಪ್ಪಳ | | |
| 11. | ರಾಯಚೂರು | ಮಹಮ್ಮದ್ ಯೂಸೂಫ್ ವೈ.ಎಂ., ನಿರ್ದೇಶಕರು (ಅಭಿವೃದ್ಧಿ), ಕ.ಪಂ.ರಾ.ಆ. | -- |
| 12. | ಯಾದಗಿರಿ | | |
| 13. | ಬಳ್ಳಾರಿ | ಉತ್ತಮ್ ಬಿ.ಕೆ., ಉಪ ನಿರ್ದೇಶಕರು-2, ಕ.ಪಂ.ರಾ.ಆ. | ನಂಜುಂಡರಾವ್, ಸಮಾಲೋಚಕರು |
| 14. | ವಿಜಯನಗರ | | |
| 15. | ಕೋಲಾರ | ಆರತಿ ಎಸ್. ರಾವ್, ಉಪ ನಿರ್ದೇಶಕರು (ಆಡಳಿತ), ಕ.ಪಂ.ರಾ.ಆ. | ಮುಬಾರಕ್ ಅಹ್ಮದ್, ಸಮಾಲೋಚಕರು |
| 16. | ಬೆಂಗಳೂರು ನಗರ | | |
| 17. | ರಾಮನಗರ | ನವೀನ್ ಕುಮಾರ್ ಬಿ., ಉಪ ನಿರ್ದೇಶಕರು-1, ಕ.ಪಂ.ರಾ.ಆ. | ವಸುಂಧರ ದೇವಿ, ಸಮಾಲೋಚಕರು |
| 18. | ಚಾಮರಾಜನಗರ | | |
| 19. | ಮಂಡ್ಯ | | |
| 20. | ಶಿವಮೊಗ್ಗ | | |
| 21. | ದಕ್ಷಿಣ ಕನ್ನಡ | ಕೆ.ಸಿ. ದೇವರಾಜೇಗೌಡ, ನಿರ್ದೇಶಕರು (ಆಡಳಿತ-2), ಕ.ಪಂ.ರಾ.ಆ. | -- |
| 22. | ಚಿಕ್ಕಬಳ್ಳಾಪುರ | | |
| 23. | ಉಡುಪಿ | | |
| 24. | ಚಿತ್ರದುರ್ಗ | ಕೆ.ಜಿ. ಜಗದೀಶ್, ಉಪ ನಿರ್ದೇಶಕರು-6, ಕ.ಪಂ.ರಾ.ಆ. | ವೇಣುಗೋಪಾಲ್, ಸಮಾಲೋಚಕರು |
| 25. | ದಾವಣಗೆರೆ | | |
| 26. | ಮೈಸೂರು | ಗಗನ್ ಎ.ಎಸ್., ಉಪನಿರ್ದೇಶಕರು-3, ಕ.ಪಂ.ರಾ.ಆ. | ಎಂ.ಕೆ. ಕೆಂಪೇಗೌಡ, ಸಲಹೆಗಾರರು |
| 27. | ಹಾಸನ | | |
| 28. | ಕೊಡಗು | | |
| 29. | ಚಿಕ್ಕಮಗಳೂರು | | |
| 30. | ಬೆಂಗಳೂರು ಗ್ರಾಮಾಂತರ | ನಾಗವೇಣಿ, ಉಪನಿರ್ದೇಶಕರು-5, ಕ.ಪಂ.ರಾ.ಆ. | ಎಂ.ಕೆ. ಕೆಂಪೇಗೌಡ, ಸಲಹೆಗಾರರು |
| 31. | ತುಮಕೂರು | | |

**** ನೋಡಲ್ ಅಧಿಕಾರಿಗಳು ನಿರ್ವಹಿಸಬೇಕಾದ ಜವಾಬ್ದಾರಿಗಳು ****

1. ಜಿಲ್ಲೆಯಲ್ಲಿ ಪ್ರಸ್ತುತ ಯೋಜಿಸಿರುವ ದೂರದೃಷ್ಟಿ ಯೋಜನಾ ಪ್ರಕ್ರಿಯೆ ಪರಿಣಾಮಕಾರಿಯಾಗಿ ನಡೆಯಲು ಅವಶ್ಯ ಮಾರ್ಗದರ್ಶನ ನೀಡಿ ಮೇಲ್ವಿಚಾರಣೆ ನಡೆಸುವುದು.
2. ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್ ಹಾಗೂ ಗ್ರಾಮ ಪಂಚಾಯಿತಿಗಳು ವಿವಿಧ ಯೋಜನೆಗಳ/ಕಾರ್ಯಕ್ರಮಗಳ ವಾರ್ಷಿಕ ಕ್ರಿಯಾ ಯೋಜನೆ ನಿಯಮಾನುಸಾರ ಸಿದ್ಧಪಡಿಸಿ ಅನುಮೋದನೆ ಪಡೆದುಕೊಂಡಿರುವ ಬಗ್ಗೆ ಪರಿಶೀಲಿಸುವುದು. ಕ್ರಿಯಾ ಯೋಜನೆಗಳಲ್ಲಿ ಮಹಿಳೆಯರು, ಮಕ್ಕಳು, ಪರಿಶಿಷ್ಟ ಜಾತಿ/ಪಂಗಡ ಹಾಗೂ ಹಿರಿಯ ನಾಗರೀಕರಿಗೆ ನಿಯಮಾನುಸಾರ ಆದ್ಯತೆ ನೀಡಿರುವ ಬಗ್ಗೆ ಪರಿಶೀಲಿಸುವುದು ಹಾಗೂ ಕ್ರಿಯಾ ಯೋಜನೆಗಳ ಅನುಷ್ಠಾನಕ್ಕೆ ಕೈಗೊಂಡಿರುವ ಕ್ರಮಗಳು ಹಾಗೂ ಪ್ರಗತಿ ಬಗ್ಗೆ ಮೇಲ್ವಿಚಾರಣೆ ನಡೆಸುವುದು.
3. ಗ್ರಾಮ ಪಂಚಾಯಿತಿಗಳ ಗ್ರಾಮ ಸಭೆ/ವಾರ್ಡ್ ಸಭೆ/ಮಹಿಳಾ/ಮಕ್ಕಳ/ವಿಶೇಷ ಗ್ರಾಮ ಸಭೆಗಳು ಮತ್ತು ಜಿಲ್ಲಾ ಪಂಚಾಯಿತಿ/ತಾಲೂಕು ಪಂಚಾಯಿತಿ/ಗ್ರಾಮ ಪಂಚಾಯಿತಿಗಳ ಸಾಮಾನ್ಯ ಸಭೆಗಳು, ಕೆ.ಡಿ.ಪಿ. ಸಭೆಗಳು ನಿಯಮಿತವಾಗಿ ನಡೆಯುತ್ತಿರುವ ಬಗ್ಗೆ ಪರಿಶೀಲನೆ ನಡೆಸುವುದು.

ಮುಂದುವರೆದಿದೆ.,

4. ಜಿಲ್ಲಾ ಪಂಚಾಯಿತಿ/ತಾಲೂಕು ಪಂಚಾಯಿತಿ/ಗ್ರಾಮ ಪಂಚಾಯಿತಿಯ ಯೋಜನಾ ಸಮಿತಿಗಳ ರಚನೆ ಮತ್ತು ಇತರೆ ಸಮಿತಿ ಮತ್ತುಉಪ ಸಮಿತಿಗಳ ರಚನೆ ಹಾಗೂ ಸಭೆಗಳನ್ನು ನಿಯಮಿತವಾಗಿ ನಡೆಯುತ್ತಿರುವ ಬಗ್ಗೆ ಹಾಗೂ ಹಾಜರಾತಿ ಕುರಿತು ಪರಿಶೀಲಿಸುವುದು.
5. ಜಿಲ್ಲಾ ಪಂಚಾಯಿತಿ, ತಾಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳಲ್ಲಿ ಸಾರ್ವಜನಿಕ ಕುಂದು ಕೊರತೆ ನಿವಾರಣೆಗೆ ಕೈಗೊಂಡಿರುವ ಕ್ರಮಗಳು.
6. ಜಿಲ್ಲಾ ಪಂಚಾಯಿತಿ, ತಾಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳಲ್ಲಿ ನ್ಯಾಯಾಲಯ ಪ್ರಕರಣಗಳು, ಲೋಕಾಯುಕ್ತ ಪ್ರಕರಣಗಳು ಮತ್ತು ಇಲಾಖಾ ವಿಚಾರಣೆಗಳ ಬಗ್ಗೆ ಕೈಗೊಂಡಿರುವ ಕ್ರಮಗಳು.
7. ಗ್ರಾಮ ಪಂಚಾಯಿತಿಯ ಗ್ರಂಥಾಲಯಗಳ ಮತ್ತು ಮಾಹಿತಿ ಕೇಂದ್ರಗಳ ಉನ್ನತೀಕರಣ, ಡಿಜಿಟಲೀಕರಣಕ್ಕೆ ಕೈಗೊಂಡಿರುವ ಕ್ರಮಗಳು ಹಾಗೂ " **ಓದುವ ಬೆಳಕು** " ಕಾರ್ಯಕ್ರಮದ ಅನುಷ್ಠಾನ ಕುರಿತು ಅವಲೋಕಿಸಲು ಕನಿಷ್ಠ 02 ಗ್ರಾಮ ಪಂಚಾಯಿತಿ ಗ್ರಂಥಾಲಯಗಳಿಗೆ ಭೇಟಿ ನೀಡುವುದು ಹಾಗೂ ಗ್ರಂಥಾಲಯ ಮೇಲ್ವಿಚಾರಕರುಗಳಿಗೆ ಅಗತ್ಯ ಮಾರ್ಗದರ್ಶನ ನೀಡುವುದು.
8. ಮಹಿಳಾ ಸ್ವಸಹಾಯ ಗುಂಪುಗಳು, ಒಕ್ಕೂಟಗಳ ರಚನೆ, ಘನತ್ಯಾಜ್ಯ ವಿಲೇವಾರಿಯಲ್ಲಿ ಮಹಿಳೆಯರ ಪಾತ್ರದ ಬಗ್ಗೆ ಪರಿಶೀಲನೆ ಮತ್ತು ಪರಿಣಾಮಕಾರಿ ಘನತ್ಯಾಜ್ಯ ವಿಲೇವಾರಿಯ ಅನುಷ್ಠಾನ.
9. ಜಿಲ್ಲಾ ಪಂಚಾಯಿತಿಗಳ/ತಾಲೂಕು ಪಂಚಾಯಿತಿಗಳ/ಗ್ರಾಮ ಪಂಚಾಯಿತಿಗಳ ಆಡಿಟ್ ವರದಿಗಳನ್ನು ತೀರುವಳಿಗೊಳಿಸಿರುವ ಬಗ್ಗೆ ಕೈಗೊಂಡಿರುವ ಕ್ರಮಗಳು.
10. ಗ್ರಾಮ ಪಂಚಾಯಿತಿಗಳು ಸ್ವಂತ ಸಂಪನ್ಮೂಲ ಸಂಗ್ರಹಣೆ ಸಂಬಂಧ ತೆರಿಗೆ ನಿರ್ಧರಣಾ ಪರಿಷ್ಕರಣೆ, ವಸೂಲಾತಿ ಬಗ್ಗೆ ಮೇಲ್ವಿಚಾರಣೆ ಮಾಡುವುದು, ನೂತನ ತೆರಿಗೆ ನಿಯಮಗಳ ಬಗ್ಗೆ ಅರಿವು ಮೂಡಿಸುವುದು.
11. ಭೇಟಿ ನೀಡಿದ ಸಂದರ್ಭದಲ್ಲಿ ಜಿಲ್ಲಾ ಪಂಚಾಯಿತಿಯಿಂದ ನಿಯೋಜಿಸಲಾದ ಆಯಾ ತಾಲೂಕಿನ ನೋಡಲ್ ಅಧಿಕಾರಿಯು ಜೊತೆಯಲ್ಲಿದ್ದು, ಇಲಾಖೆಯ ಯೋಜನೆ ಮತ್ತು ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನ ಕುರಿತು ವೀಕ್ಷಿಸುವುದು ಹಾಗೂ ಪ್ರಗತಿ ಪರಿಶೀಲನೆ ನಡೆಸುವುದು. ಗಮನಿಸಲಾದ ಉತ್ತಮ ಅಂಶಗಳು ಮತ್ತು ಕೊರತೆಗಳನ್ನು ಗುರುತಿಸಿ ವಿವರವಾದ ವರದಿಯನ್ನು ಸಿದ್ಧಪಡಿಸಿ ಆಯುಕ್ತಾಲಯಕ್ಕೆ ಸಲ್ಲಿಸುವುದು.

**ಹಂಚಿಕೆ ಮಾಡಲಾದ ಜಿಲ್ಲೆಗಳಿಗೆ ಅಧಿಕಾರಿಗಳು ಭೇಟಿ ನೀಡುವ ಸಂದರ್ಭದಲ್ಲಿ ಅಗತ್ಯ ಸಹಕಾರವನ್ನು ನೀಡಲು ಎಲ್ಲಾ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ತಿಳಿಸಿದೆ.**

**ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರಿಂದ ಅನುಮೋದಿಸಲ್ಪಟ್ಟಿದೆ.**

ಆಯುಕ್ತರು,
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ.

**ಇವರಿಗೆ:**

1. ಶ್ರೀ ಶ್ರೀನಿವಾಸ್ ಹೆಚ್.ಎಂ., ನಿರ್ದೇಶಕರು (ಗ್ರಾಮೀಣಾಭಿವೃದ್ಧಿ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
2. ಶ್ರೀ ಮಹಮ್ಮದ್ ಯೂಸೂಫ್ ವೈ.ಎಂ., ನಿರ್ದೇಶಕರು (ಅಭಿವೃದ್ಧಿ), ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು.
3. ಶ್ರೀ ರುದ್ರಪ್ಪ ಕೆ.ಆರ್., ನಿರ್ದೇಶಕರು (ಪಂ.ರಾ.), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
4. ಡಾ|| ಏಕಾಂತಪ್ಪ ಎಂ.ಆರ್., ನಿರ್ದೇಶಕರು (ಆಡಳಿತ-1), ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು.
5. ಶ್ರೀ ಕೆ.ಸಿ. ದೇವರಾಜೇಗೌಡ, ನಿರ್ದೇಶಕರು (ಆಡಳಿತ-2), ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು.
6. ಶ್ರೀ ನವೀನ್ ಕುಮಾರ್ ಬಿ., ಉಪ ನಿರ್ದೇಶಕರು-1, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು ಹಾಗೂ ಸರ್ಕಾರದ ಅಧೀನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.

ಮುಂದುವರೆದಿದೆ.,

7. ಶ್ರೀಮತಿ ಆರತಿ ಎಸ್. ರಾವ್, ಉಪ ನಿರ್ದೇಶಕರು (ಆಡಳಿತ), ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು.
8. ಶ್ರೀ ಕೆ.ಜಿ. ಜಗದೀಶ್, ಉಪ ನಿರ್ದೇಶಕರು-6, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು.
9. ಶ್ರೀ ಗಗನ್ ಎ.ಎಸ್., ಉಪನಿರ್ದೇಶಕರು-3, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು.
10. ಶ್ರೀ ಕೀರ್ತಿಕರ್ ವಿ.ಟಿ., ಉಪ ನಿರ್ದೇಶಕರು-4, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು.
11. ಶ್ರೀ ಉತ್ತಮ್ ಬಿ.ಕೆ., ಉಪ ನಿರ್ದೇಶಕರು-2, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು.
12. ಶ್ರೀಮತಿ ನಾಗವೇಣಿ, ಉಪನಿರ್ದೇಶಕರು-5, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು.
13. ಶ್ರೀ ಡಿ. ಪ್ರಾಣೇಶ್ ರಾವ್, ಸಮಾಲೋಚಕರು (ANSSIRD).
14. ಶ್ರೀ ಎಂ.ಕೆ. ಕೆಂಪೇಗೌಡ, ಸಾಮಾಜಿಕ ಪರಿಶೋಧನಾ ನಿರ್ದೇಶನಾಲಯ ಹಾಗೂ ಸಲಹೆಗಾರರು (ಪಂ.ರಾಜ್), ಬೆಂಗಳೂರು.
15. ಶ್ರೀಮತಿ ವಸುಂಧರ ದೇವಿ, ಸಂಶೋಧನಾ ಅಧಿಕಾರಿ, ವಿಕೇಂದ್ರೀಕರಣ ವಿಶ್ಲೇಷಣಾ ಕೇಂದ್ರ, ಬೆಂಗಳೂರು.
16. ಶ್ರೀ ಮುಬಾರಕ್ ಅಹ್ಮದ್, ಸಮಾಲೋಚಕರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು.
17. ಶ್ರೀ ವೇಣುಗೋಪಾಲ್, ಸಮಾಲೋಚಕರು (DAC).
18. ಶ್ರೀ ನಂಜುಂಡರಾವ್, ಸಮಾಲೋಚಕರು, ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ.

**ಪ್ರತಿಯನ್ನು ಮಾಹಿತಿಗಾಗಿ/ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.**

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ ರವರ ಆಪ್ತ ಸಹಾಯಕರು, ಬೆಂಗಳೂರು.
5. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.